

ಪೋಲಿಷ್ ಲಿಥುನೇನಿಯನ್ ಅಮೆರಿಕನ್ ಪುಸ್ತಕ ವ್ಯಾಪಾರಿಯ ಹೆಸರೇ ಈ ಹಸ್ತಪ್ರತಿಗೆ ಬಂದಿತು. ಇಂದು ಯೇಲ್ ವಿಶ್ವ ವಿದ್ಯಾಲಯದ ಬೀನಿಕ್ ಅಪರೂಪದ ಪುಸ್ತಕ ಮತ್ತು ಹಸ್ತಪ್ರತಿ ಗ್ರಂಥಾಲಯಕ್ಕೆ ಸೇರಿದೆ.

## ಹಸ್ತಪ್ರತಿ

ಪುಸ್ತಕ ರಚನೆಯಾದಾಗ ಅದರಲ್ಲಿ 272 ಪುಟಗಳಿದ್ದರೂ 1912ರಲ್ಲಿ ವಾಯ್ನಿಷ್ ಕೈ ಸೇರುವಷ್ಟು ಹೊತ್ತಿಗೆ ನಡುವಿನ ಪುಟಗಳು ಕಾಣೆಯಾಗಿ 240ಕ್ಕೆ ಇಳಿದಿತ್ತು. ಚರ್ಮದ ಹಾಳೆಯ ಮೇಲೆ ಕ್ವಿಲ್ ಹಕ್ಕಿಯ ಪುಕ್ಕದಲ್ಲಿ ಬರೆಯಲಾಗಿರುವ ಪುಸ್ತಕದಲ್ಲಿ ಚಿತ್ರಗಳಿಗೆ ಬಣ್ಣವನ್ನು ಸ್ವಲ್ಪ ಕಾಲದ ನಂತರ ಹಾಕಿದಂತೆ ಕಾಣುತ್ತದೆ. ಈ ಪುಸ್ತಕದ ಇತಿಹಾಸದಲ್ಲಿ ಇದನ್ನು ಅನೇಕ ಬಾರಿ ನಕಲು ಮಾಡಿದಂತೆ ತೋರುತ್ತದೆ ಹಾಗೂ ಈ ಪ್ರಯತ್ನದಲ್ಲಿ ಪುಟಗಳ ಜೋಡಣೆಯ ಕ್ರಮದಲ್ಲೇ ಏರುಪೇರಾಗಿದೆ. ಈ ಪಠ್ಯ ಎಡದಿಂದ ಬಲಕ್ಕೆ ಬರೆಯಲಾಗಿದೆ. ಪಂಕ್ಚುಯೇಷನ್‌ಗಳು ಇಲ್ಲದ ಪಠ್ಯವನ್ನು ಪ್ಯಾರಾಗಳಾಗಿ ವಿಂಗಡಿಸಿ ಮುಖ್ಯ ಸಾಲುಗಳ ಪ್ರಾರಂಭದಲ್ಲಿ ನಕ್ಷತ್ರ/ ಹೂಗಳ ಚಿತ್ರವನ್ನು ಬುಲೆಟ್ ಗಳಂತೆ ಬರೆಯಲಾಗಿದೆ. ಬರೆದಿರುವ ಶೈಲಿ ನೋಡಿದರೆ ಅಕ್ಷರಗಳನ್ನು ಸುಂದರವಾಗಿಯೂ ನೈಪುಣ್ಯತೆಯಿಂದಲೂ ಬರೆದಂತೆ ತೋರುತ್ತದೆ. ಇದನ್ನು ನೋಡಿದರೆ ಸೈಫರ್ ಇರಲಾರದೆನಿಸುತ್ತದೆ.

ಇಡೀ ಪುಸ್ತಕವನ್ನು ಪರೀಕ್ಷಿಸಿರುವ ಪಂಡಿತರ ಪ್ರಕಾರ ಅದರಲ್ಲಿ 1,70,000 ವಿವಿಧ ಅಕ್ಷರಗಳಿವೆ. ಪ್ರತಿಯೊಂದು ಅಕ್ಷರವೂ ಒಂದು ಅಥವಾ ಎರಡು ಗೆರೆಗಳಲ್ಲಿ ರಚಿತವಾಗಿವೆ. ಕೆಲವರು ಹೇಳುವ ಪ್ರಕಾರ ಇದರಲ್ಲಿ ಕೇವಲ 20 30 ಅಕ್ಷರಗಳು ಮಾತ್ರ ನಿಜವಾದ ವರ್ಣಮಾಲೆಯ (ವ್ಯಂಜನಗಳು) ಅಕ್ಷರಗಳಿವೆ.ಉಳಿದೆಲ್ಲವೂ ಅವುಗಳ ಗುಣಿತಾಕ್ಷರಗಳು. ಕೆಲವು ಅಕ್ಷರಗಳು ಇಡೀ ಪುಸ್ತಕದಲ್ಲಿ ಕೇವಲ ಒಂದೆರಡು ಬಾರಿ ಮಾತ್ರ ಕಾಣಿಸಿಕೊಂಡಿವೆ.

ವಿವಿಧ ಅಳತೆಯ 35,000 ಪದಗಳು ಇದ್ದು ಸ್ವರ, ವ್ಯಂಜನದಂತಹ ಉಚ್ಚರಣೆಯ ನಿಯಮಗಳ ತರ್ಕಕ್ಕೆ ಬೀಳುವಂತಿದ್ದು ನೈಸರ್ಗಿಕ ಭಾಷೆಯಂತಿದೆ. ಪ್ರತಿಯೊಂದು ಮೂಲಿಕೆ ಚಿತ್ರವಿರುವ ಪುಟದಲ್ಲೂ ಮೊದಲ ಪದ ಒಮ್ಮೆ ಮಾತ್ರ ಕಾಣಿಸಿಕೊಂಡಿದೆ. ಬಹುಶಃ ಇದು ಆ ಮೂಲಿಕೆಯ ಹೆಸರಿರಬಹುದು. ಇದು ಯೂರೋಪಿಯನ್ ಭಾಷೆಯಂತೆ ಇಲ್ಲ. ಪದಗಳಲ್ಲಿ ಅಕ್ಷರಗಳ ಹಂಚಿಕೆಯೂ ವಿಶಿಷ್ಟವಾಗಿದೆ. ಕೆಲವು ಅಕ್ಷರಗಳು ಯಾವಾಗಲೂ ಪದದ ಮೊದಲು ಮಾತ್ರ ಬರುತ್ತವೆ ಇನ್ನು ಕೆಲವು ಯಾವಾಗಲೂ ಕೊನೆಯಲ್ಲಿ ಇನ್ನು ಕೆಲವು ಯಾವಾಗಲೂ ಮಧ್ಯದಲ್ಲಿ ಕಾಣಿಸುತ್ತವೆ.

ಪುಸ್ತಕದ ಕೊನೆಯಲ್ಲಿ ಲ್ಯಾಟಿನ್ ತರಹ ಇರುವ ಅಕ್ಷರಗಳಲ್ಲಿ ಕೆಲವು ಪದಗಳನ್ನು ಬರೆಯಲಾಗಿದೆ ಆದರೆ ಅದು ನಮಗೆ ತಿಳಿದಿರುವ ಯಾವ ಭಾಷೆಯಲ್ಲೂ ಯಾವ ಅರ್ಥವನ್ನೂ ಕೊಡುವುದಿಲ್ಲ. ಪುಸ್ತಕದ ಖಗೋಳ ಶಾಸ್ತ್ರದ ವಿಭಾಗದಲ್ಲಿ ಲ್ಯಾಟಿನ್ ಭಾಷೆಯಲ್ಲಿ ಮಾರ್ಚಿಯಿಂದ ಡಿಸೆಂಬರ್‌ವರೆಗಿನ ಹತ್ತು ತಿಂಗಳ ಹೆಸರುಗಳನ್ನು ಬರೆಯಲಾಗಿದೆ. ಆದರೆ ಈ ಪದಗಳನ್ನು ಪುಸ್ತಕ ರಚನೆಯ ಕಾಲದಲ್ಲಿ ಮೂಲ ಲೇಖಕ ಬರೆದಿದ್ದನೋ ಅಥವಾ ನಂತರದ ವರ್ಷಗಳಲ್ಲಿ ಯಾರೋ ಸೇರಿಸಿದ್ದೋ ಗೊತ್ತಿಲ್ಲ.

## ಪುಸ್ತಕದಲ್ಲಿ ಏನಿದೆ?

ಈ ಪುಸ್ತಕದ ಭಾಷೆ ಅರ್ಥವಾಗದಿದ್ದರೂ ಪುಟಪುಟದಲ್ಲೂ ಇರುವ ಚಿತ್ರಗಳು ಪಠ್ಯದ ವಿಷಯವೇನಿರಬಹುದೆಂದು ಸೂಚಿಸುತ್ತದೆ. ಅದರ ಆಧಾರದ ಮೇಲೆ ಹೇಳುವುದಾದರೆ, ಪುಸ್ತಕದಲ್ಲಿ ಆರು ವಿಭಿನ್ನ ವಿಷಯಗಳನ್ನು ಒಳಗೊಂಡ ಅಧ್ಯಾಯಗಳಿವೆ.

ಅಧ್ಯಾಯ ಒಂದು: ಮೂಲಿಕೆಗಳು: ಪ್ರತಿಯೊಂದು ಪುಟದಲ್ಲೂ ಒಂದು (ಕೆಲವು ಬಾರಿ ಎರಡು) ಗಿಡ ಮೂಲಿಕೆಗಳ ಚಿತ್ರವಿದೆ. ಮತ್ತು ಅದಕ್ಕೆ ಸಂಬಂಧಿಸಿದ ಒಂದು ಪ್ಯಾರಾ ಬರಹ. ಈ ಚಿತ್ರಗಳು ಆಗಿನ ಕಾಲದ ಯೂರೋಪಿನ ಗಿಡ ಮೂಲಿಕೆಗಳನ್ನು ಸೂಚಿಸುತ್ತವೆ. ಇದು ಖಂಡಿತಾ ಔಷಧೀಯ ಸಸ್ಯಗಳ ಮಾಹಿತಿ. ಆದರೆ ಚಿತ್ರಗಳನ್ನು ನೋಡಿದರೆ ಗೊಂದಲವಿಲ್ಲದೆ ಇದೇ ಗಿಡ ಎಂದು ಹೇಳುವಂತೆ ಯಾವುದೂ ಕಾಣುವುದಿಲ್ಲ.